**<u>ಸಾಕ್ಷಿಗೆ ದಿನಾಂಕ *14-02-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : *1* ನೇ ಎದುರುದಾರರ ಪರ ಶ್ರೀ. ಎಮ್ ಬಿ ಬಿ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನನ್ನ ವಕೀಲರು ಮಾಹಿತಿ ನೀಡಿರುತ್ತಾರೆ. ನನ್ನ ಮುಖ್ಯ ಅರ್ಜಿಗೆ ನನ್ನ ವಕೀಲರು ಮಾಹಿತಿ ನೀಡಿರುತ್ತಾರೆ. ನನ್ನ ಗಂಡ ಮನೆಗೆ ಬಂದ ನಂತರ ದಿನಸಿ ತರಲು ಹೊರಗಡೆ ಹೋಗಿದ್ದರು. ನನ್ನ ಗಂಡನ ತಪ್ಪಿನಿಂದ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ನಡೆಸುತ್ತಿದ್ದ ವಾಹನದ ನಂಬರ ನೆನಪಿರುವುದಿಲ್ಲ. ಅಪಘಾತವಾದ ದಿನ ದೂರನ್ನು ನಾನು ನೀಡಿರುತ್ತೇನೆ. ದೂರು ನೀಡಲು ಮಾಹಿತಿಯನ್ನು ನನ್ನ ವಕೀಲರು ನೀಡಿರುತ್ತಾರೆ. ಈ ರೀತಿ ಬರೆದರೆ ಪರಿಹಾರ ಬರುತ್ತದೆ ನಮ್ಮ ವಕೀಲರು ನನಗೆ ಹೇಳಿರುತ್ತಾರೆ. ನಾನು ನಮ್ಮ ವಕೀಲರ ಮಾತು ಕೇಳಿ ಸುಳು ದೂರನ್ನು 1 ನೇ ಎದುರುದಾರರ ಮೇಲೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಚಾಲಕನಾಗಿದ್ದನು. ನನ್ನ ಗಂಡ ಚಾಲಕ ಇದ್ದ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತದೆ. ನನ್ನ ಗಂಡ ಉಡುಪಿ ಜಿಲ್ಲೆಯ ಬಂಟಕಲ್ಲ ಊರಿನಲ್ಲಿ ಚಾಲಕ ಎಂದು ಕೆಲಸ ಮಾಡುತ್ತಿದ್ದರು. ನನ್ನ ಗಂಡನಿಗೆ ತಿಂಗಳ ಸಂಬಳವನ್ನು ಕೊಡುತ್ತಿದ್ದರು. ನನ್ನ ಗಂಡನಿಗೆ ತಿಂಗಳಿಗೆ 24 ಸಾವಿರ ರೂ.ಗಳ ಸಂಬಳವನ್ನು ನೀಡುತ್ತಿದ್ದರು. ನನ್ನ ಗಂಡ ಚಾಲಕ ಇದ್ದರು ಎಂದು ಮತ್ತು ಅವರಿಗೆ ತಿಂಗಳಿಗೆ 24 ಸಾವಿರ ರೂ.ಗಳ ಸಂಬಳ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ ಬಾಳಪ್ಪ ಹೊಲ ಮನೆ ಕೆಲಸ ಮಾಡುತ್ತಾರೆ. ನನ್ನ ಮಾವ ಬಾಳಪ್ಪ ನಮ್ಮನ್ನು ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿದಾರರು ನನ್ನ ಗಂಡ ನೋಡಿಕೊಳ್ಳುತ್ತಿದ್ದ ಎಂದುಹೇಳುತ್ತಾರೆ. 1 ನೇ ಎದರುದಾರರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮಾವನ ಆದಾಯದ ಮೇಲೆ ಅವಲಂಬಿತರಾಗಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ನಿರ್ಲಕ್ಷತನದಿಂದ ಅಪಘಾತ ಸಂಬವಿಸದೇ ಇದ್ದರೂ ಕೂಡ ಪರಿಹಾರಕ್ಕೋಸ್ಕರ 1 ನೇ ಎದುರುದಾರರ ಮೇಲೆ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : *2* ನೇ ಎದುರುದಾರರ ಪರ ಶ್ರೀಮತಿ ಬಿ ಜಿ ಎಸ್ ವಕೀಲರಿಂದಃ</u>**

ನನ್ನ ಗಂಡ ಉಡುಪಿ ಜಿಲ್ಲೆಯ ಬಂಟಕಲ್ಲ ಗ್ರಾಮದಲ್ಲಿ ಅಶೋಕ ಇಂಪ್ಲೆಕ್ಸ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರು *2012* ರಲ್ಲಿ ಕೆಲಸಕ್ಕೆ ಸೇರಿದ್ದರು. ನನ್ನ ಗಂಡ ಕೆಲಸಕ್ಕೆ ಸೇರಿದ್ದರು

ಎಂದು ತೋರಿಸಲು ನೇಮಕಾತಿ ಪತ್ರವನ್ನು ಹಾಜರು ಪಡಿಸಿರುತ್ತೇನೆ. ನನ್ನ ಗಂಡ *2012* ರಲ್ಲಿ ಕೆಲಸಕ್ಕೆ ಸೇರಿದ್ದರು ಎಂದು ಮತ್ತು ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಲಾರಿಯನ್ನು ಚಲಾಯಿಸುತ್ತಿದ್ದರು. ನನ್ನ ಗಂಡನಿಗೆ ಡಿ ಎಲ್ ನ್ನು ಇದ್ದ ಬಗ್ಗೆ ಮಾನ್ಯ ನ್ಯಾಯಾಯಕ್ಕೆ ಸಲ್ಲಿಸಿರುವುದಿಲ್ಲ. ನನ್ನ ಗಂಡ ಅಶೋಕ ಇಂಪ್ಲೆಕ್ಸ ಕಂಪನಿಯಲ್ಲಿ ಚಾಲಕ ಎಂದು ಕೆಲಸ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಕಂಪನಿಯವರು *21* ಸಾವಿರ *1* ನೂರು ರೂ.ಗಳ ಸಂಬಳವನ್ನು ಅವರ ಖಾತೆಗೆ ಹಾಕುತ್ತಿದ್ದರು. ನನ್ನ ಗಂಡನಿಗೆ ಕಂಪನಿಯವರು ಸಂಬಳ ಕೊಡುತ್ತಿದ್ದರು ಎಂದು ತೋರಿಸಲು ಪೇಮೆಂಟ ರಜಿಸ್ಟರ ಅಥವಾ ಓಚರನ್ನು ಹಾಜರು ಪಡಿಸಿರುವುದಿಲ್ಲ. ನಿಪಿ-*7*ನ್ನು ನನ್ನ ಗಂಡನ ಕಂಪನಿಯ ಮ್ಯಾನೇಜರ ಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿ ಮಾಡಿ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-*7*ಕ್ಕೆ ಸಂಬಂದಪಟ್ಟಂತೆ ಪೇಮೆಂಟ ರಜಿಸ್ಟರ ಅಥವಾ ಓಚರನ್ನು ಹಾಜರು ಪಡಿಸಿರುವುದಿಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ನನ್ನ ಗಂಡ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅವರು ಸಂಬಳ ಪಡೆಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ವಯಸ್ಸು ತೋರಿಸಲು ಆಧಾರ ಕಾರ್ಡ ಅಥವಾ ಡಿ ಎಲ್ ನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಆಧಾರ ಕಾರ್ಡನ್ನು ಹಾಜರು ಪಡಿಸಿರುತ್ತೇನೆ ಎಂದುಹೇಳುತ್ತಾರೆ. ಆಧಾರ ಕಾರ್ಡನ್ನು ಹಾಜರು ಪಡಿಸಿದರೆ ಅವರ ನಿಜವಾದ ವಯಸ್ಸು ಗೊತ್ತಾಗುತ್ತದೆ ಎಂದು ಅದನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮೋಟರ ಸೈಕಲ್ಲ ಅಪಘಾತದಿಂದ ತೀರಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

HANAMANTARAO R KULKARNI

Digitally signed by HANAMANTARAO R KULKARNI
Date: 2025.02.15 17:36:45 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.